ಶ್ರೀ ಕೆ. ರಾಮ್‌ಭಟ್.—ನನಗೆ ಇದರಲ್ಲಿ ಕೆಲವು ಸಂಶಯಗಳು ಇವೆ. ಇಲ್ಲಿ ವೆಯಿಟಿಂಗ್ ಚಾರ್ಜ್ ಎಂದು ಮಾಡಿದ್ದಾರೆ. ಬಸ್ಸುಗಳು ಪರಮಾವಧಿ ಎಷ್ಟು ದಿವಸ ಕಾದು ನಿಂತಿದ್ದವು ? ಇಂತಿಷ್ಟು ಕಿಲೋ ಮೀಟರ್ ಬೆಂಗಳೂರು ಒಳಗೆ ಓಡಿರತಕ್ಕ ಬಸ್ಸುಗಳಿಗೆ ಚಾರ್ಜಸ್ ಹಾಕಿಲ್ಲವೆ ?

ಶ್ರೀ ಕೆ. ಯಂಕಟಪ್ಪ.—ಅಪ್ ಅಂಡ್ ಡೌನ್ ಲೆಕ್ಕ ಹಾಕಿ ಹಣ ತೆಗೆದುಕೊಂಡಿದ್ದಾರೆ.

Construction of National High ways in the State

751. SRI G. RAJU GOWDA (Hanur).—Will the Minister for Public Works be pleased to state :—

(a) amount of assistance obtained by the State Government from the Centre in the year 1979-80 and 1980-81 to construct National Highways ;

(b) length of National Highways in our State ;

(c) amount to be spent per Kilometer each year towards maintenance of those roads ;

(d) whether it has come to the notice of the Government that the length of the National High Ways which would be constructed by the Government is lesser in length when compared to the length and width of our State roads with that of roads of neighbouring States ?

SRI KAGODU THIMMAPPA (Minister for Public Works).—

(a) Amount of assistance obtained by the State Government from the Central Government for construction of National High Ways is as follows :—

Year	Assistance (Rs. in lakhs)
1	2
1979-80 ...	510.00
1980-81 ...	650.00

(b) 1968.20 K.M.

(c) Approximately Rs. 24.000 per annum per K. M. will be spent.

(d) It has come to the notice of the Government.

ಶ್ರೀ ಜಿ. ರಾಜುಗೌಡ.—೧೯೭೯-೮೦ ಮತ್ತು ೧೯೮೦-೮೧ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಪಡೆದಿರತಕ್ಕ ನೆರವಿನಿಂದ ರಾಜ್ಯದಲ್ಲಿ ಎಷ್ಟು ಉದ್ದದ ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಾಣ ಮಾಡಿದ್ದೀರಿ?

ಶ್ರೀ ಕಾಗೋಡು ತಿಮ್ಮಪ್ಪ.—ಯಾವ ಯಾವ ರಸ್ತೆಯಲ್ಲಿ ಎಷ್ಟು ಉದ್ದ ಮಾಡಿದ್ದೇವೆನ್ನುವ ವಿವರ ಇಲ್ಲ. ಪ್ರತ್ಯೇಕವಾಗಿ ಕಳುಹಿಸಿಕೊಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಉದ್ದ ಎಷ್ಟು ಮಾಡಿದ್ದೀರಿ?

ಶ್ರೀ ಕಾಗೋಡು ತಿಮ್ಮಪ್ಪ.—ಬಂದಂತ ಹಣದಲ್ಲಿ ಒರಿಜನಲ್ ವರ್ಕ್ಸ್‌ಗೆ ಬಂದಿತ್ತು; ಮೆಂಟಿನೇನ್ಸ್‌ಗೆ ಬಂದಿತ್ತು. ೧೯೭೯-೮೦ ರಲ್ಲಿ ೫೧೦ ಲಕ್ಷ ರೂಪಾಯಿ ಬಂದಿತ್ತು. ೧೯೮೦-೮೧ ರಲ್ಲಿ ೬೯೧.೧೪ ಲಕ್ಷ ರೂಪಾಯಿ ಬಂದಿತು. ಇದರಲ್ಲಿ ೧೯೭೯-೮೦ ರಲ್ಲಿ ಮೆಂಟಿನೇನ್ಸ್ ಪತ್ತು ರಿಪೇರಿಗಾಗಿ ೧೨೧.೯೩ ಲಕ್ಷ ರೂಪಾಯಿಗಳು; ೧೯೮೦-೮೧ ರಲ್ಲಿ ೨೩೧.೦೫ ಲಕ್ಷ ರೂಪಾಯಿಗಳು ಬಂದಿತ್ತು.

ಶ್ರೀ ಜಿ. ರಾಜುಗೌಡ.—ನಮ್ಮ ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರತಕ್ಕ ಒಟ್ಟು ರಸ್ತೆಯಲ್ಲಿ ಎಷ್ಟು ಅಂಶ ರಾಷ್ಟ್ರೀಯ ಹೆದ್ದಾರಿ ರಸ್ತೆಗಳು ಇವೆ?

ಶ್ರೀ ಕಾಗೋಡು ತಿಮ್ಮಪ್ಪ.—ಪರ್ಸೆಂಟೇಜ್ ವಿವರ ನಮ್ಮ ಹತ್ತಿರ ಇಲ್ಲ. ೧,೯೬೮ ಕಿಲೋ ಮೀಟರ್ ರಾಷ್ಟ್ರೀಯ ಹೆದ್ದಾರಿ ಇದೆ. ೧೯೮೧ ರೊಳಗೆ ನಮ್ಮ ರಾಜ್ಯದಲ್ಲಿ ಸುಮಾರು ೩೬೯೫ ಕಿಲೋ ಮೀಟರ್‌ನಷ್ಟು ರಸ್ತೆಯಾಗಬೇಕೆಂದು ಕೇಂದ್ರದವರನ್ನು ಕೇಳಿಕೊಂಡಿದ್ದೆವು. ಇದುವರೆವಿಗೂ ಕೇಂದ್ರದಿಂದ ಅನುಮತಿ ಬಂದಿಲ್ಲ.

ಶ್ರೀ ಜಿ. ರಾಜುಗೌಡ.—ಎಷ್ಟು ಅಂಶ ಎನ್ನುವುದನ್ನು ಕರಾರುವಕ್ಕಾಗಿ ಹೇಳುವುದಕ್ಕೆ ಬರುವುದಿಲ್ಲ ವೆಂದು ಹೇಳಿದಿರಿ. ನೆರೆ ರಾಜ್ಯಗಳಿಗೆ ಹೋಲಿಸಿ ನೋಡಿದರೆ ನಮ್ಮ ರಾಜ್ಯದಲ್ಲಿ ಕಡಿಮೆ ಪ್ರಮಾಣದಲ್ಲಿ ರಾಷ್ಟ್ರೀಯ ಹೆದ್ದಾರಿ ಇದೆ ಎಂದು ಹೇಗೆ ಹೇಳುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ತಮಿಳುನಾಡು, ಕೇರಳ ಹಾಗೂ ಆಂಧ್ರ ಪ್ರದೇಶಗಳಿಗೆ ಹೋಲಿಸಿಕೊಂಡರೆ ನಮ್ಮ ರಾಜ್ಯದಲ್ಲಿರತಕ್ಕ ರಾಷ್ಟ್ರೀಯ ಹೆದ್ದಾರಿಗಳು ಕಡಿಮೆ ಪ್ರಮಾಣದಲ್ಲಿವೆ. ಇದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು ೧೧ ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮಾಡಬೇಕೆಂದು ಮತ್ತೊಂದು ಸಾರಿ ಪರಿಷ್ಕೃತ ಪಟ್ಟಿಯಲ್ಲಿ ೪ ರಸ್ತೆಗಳನ್ನು ಕೊಟ್ಟಿದ್ದೆವು; ಇಷ್ಟು ಕೊಟ್ಟರೆ; ನೆರೆ ರಾಜ್ಯಗಳ ಸಮಂಕ್ಕೆ ಬರುತ್ತೇವೆಂದು ಹೇಳಿದ್ದೇವೆ. ರಾಷ್ಟ್ರಪತಿಭವನದಲ್ಲಿ ನಡೆದಂಥ ನ್ಯಾಷನಲ್ ಟ್ರಾನ್ಸ್‌ಪೋರ್ಟ್ ಕೌನ್ಸಿಲ್ ಸಭೆಯಲ್ಲಿ ನಾನು ಹಾಜರಿದ್ದು ಈ ಅಂಶದ ಬಗ್ಗೆ ಸ್ಪಷ್ಟಮಾಡಿದ್ದೇನೆ. ದಕ್ಷಿಣ ರಾಜ್ಯಗಳಲ್ಲಿ ನಮ್ಮದೇ ಕಡಿಮೆ ಇರತಕ್ಕದ್ದು. ಇಂಥ ವ್ಯತ್ಯಾಸ ಮಾಡತಕ್ಕದ್ದು ಸಲ್ಲದು ಕರ್ನಾಟಕ ರಾಜ್ಯಕ್ಕೂ ಕೂಡ ದಕ್ಷಿಣ ರಾಜ್ಯಗಳಲ್ಲಿರತಕ್ಕ ಆಂಧ್ರ, ತಮಿಳುನಾಡು, ಕೇರಳದಷ್ಟೇ ಆಸ್ತಿತ್ವ ಇದೆ, ಯಾವುದೇ ದೃಷ್ಟಿಯಿಂದಲೂ ನಮ್ಮ ರಾಜ್ಯದ ಹಿತಾಸಕ್ತಿಯನ್ನು ಕಡೆಗಣಿಸಬಾರದೆಂದು ಅತ್ಯಂತ ಸ್ಪಷ್ಟವಾದ ಭಾಷೆಯನ್ನು ಬಳಸಿ ಹೇಳಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಮಂತ್ರಿಗಳು ಮೊದಲು ೧೧ ರಾಷ್ಟ್ರೀಯ ಹೆದ್ದಾರಿಗಳ ಒಂದು ಪಟ್ಟಿಯನ್ನು ನಮ್ಮ ಸರ್ಕಾರ ಕೇಂದ್ರಕ್ಕೆ ಕೊಟ್ಟಿದ್ದು ಆನಂತರ ಪರಿಷ್ಕೃತವಾದ ಪಟ್ಟಿಯಲ್ಲಿ ನಾಲ್ಕು ಮಾತ್ರ ಸೇರಿಸಿದ್ದೇವೆಂದು ಹೇಳಿದ್ದಾರೆ. ಹಾಗೆ ಇಲ್ಲಿಯವರೆಗೂ ನಮಗೆ ಸಫಲವಾದಂಥ ಉತ್ತರ ಬಂದಿಲ್ಲವೆಂದು ಹೇಳಿದ್ದಾರೆ. ಮೊದಲು ಕಳುಹಿಸಿರತಕ್ಕ ಪಟ್ಟಿಯಲ್ಲಿರತಕ್ಕ ೧೧ ರಾಷ್ಟ್ರೀಯ ಹೆದ್ದಾರಿಗಳು ಯಾವುವು? ಆನಂತರ ಪರಿಷ್ಕೃತ ಪಟ್ಟಿಯಲ್ಲಿ ಕೊಟ್ಟಿರತಕ್ಕ ೪ ರಾಷ್ಟ್ರೀಯ ಹೆದ್ದಾರಿಗಳಂ ಯಾವುವು ತಿಳಿಸುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ಮೊದಲ ಸಾರಿ ಕಳುಹಿಸಿದ ಪಟ್ಟಿ ಈ ರೀತಿ ಇದೆ.

1) Bangalore-Mysore-Mercara-Mangalore road (to join N.H. 17)
2) Tumkur-Arasikere, Shimoga-Sagar-Honnavar road (to join N.H. 17)
3) Belgaum-Bijapur-Gulbarga-Humanabad road (to join N.H. 9)
4) Belgaum-Bagalkot-Raichur-Mehaboobnagar (in Andhra Pradesh) road
5) Gooty on N.H. 7 in Andhra Pradesh-Guntakal-Bellary-Hospet-Koppal-Gadag-Hubli-Karwar (to join N.H. 17)

6) Mysore-Nanjangud-Gundlupet-Oooty-Coimbatore road (to join N.H. 47 in Tamil Nadu)

7) Chitradurga-Holalkere-Hosadurga-Chickmagalur- Mudigere-Belthangadi-Bantawal-Mangalore road (to join N.H. 17)

8) Mysore-Srirangapatna- Nagamangala- Chikkanayakanahalli-Huliyar-Hiriyur-Bellary-Siruguppa- Shahapur- Gulbarga-Humnabad. road. (to join N.H. 9)

9) Dharwad-Londa-Anmed-Panaji road (to join N.H. 17)

10) Padubidri-Karkala-Sringeri-Thirthalli- Shikaripur- Shiralkoppa-Hubli-Bagalkot-Hungund. road.

11) Sira-(on N.H. 4-Bangalore-Poona road) Madhugiri-Gowribidanur-Chickballapur-Chintamani- Srinivasapur-Mulbagal (on N.H. 4 Bangalore-Madras road)

ಅನಂತರ ಪರಿಷ್ಕೃತವಾದಂಥ ಪಟ್ಟಿ ಈ ರೀತಿ ಇದೆ.

1) Tumkur-Arasikere-Shimoga-Sagar-Honnavar road (to join N.H. 17)

2) Bangalore-Mysore-Mercara-Mangalore road (to join N.H. 17)

3) Belgaum-Bijapur-Gulbarga-Humnabad road (to join N.H. 9)

4) Mysore- Srirangapatna- Nagamangala- Chicknayakanahalli-Huliyar-Hiriyur-Bellary-Siruguppa-Shahapur- Gulbarga-Humnabad road (to join N.H 9)

SRI A. LAKSHMI SAGAR.--Sir, my submission is that the Government has totally failed to impress upon the Central Government to advance necessary finance for execution of these national highways. This is point No. 1 The other point is, Sir, the Central Government is having an exercise of reappraisal of the Sixth Five Year Plan. After reappraisal of the working of the Sixth Five Year Plan they are thinking of giving some money. I would like to know from the Government whether after such appraisal the Government would take seriously this matter with the Central Government and see that justice is done to Karnataka for execution of these National Highways. Sir, Bangalore is already facing traffic problem because the lorries which come from Tamil Nadu pass through Bangalore creating lot of traffic congestion and other consequent problems. The best way for diversion of this traffic would be the Chintamani-Chickballapur-Gowribidanur road joining near Sira or Tumkur road. If this diversion is effected 50 per cent of the lorries which pass through Bangalore city can be avoided. The work of this National Highway be taken up on priority basis so that the problems of Bangaloreans could be lessened to the extent of avoiding lorry traffic in Bangalore.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ ಕನ್‌ವರ್ಷನ್ ಆದ ಮೇಲೆ ಎಕ್ಸಿಕ್ಯೂಷನ್ ಪ್ರಶ್ನೆ ಬರುತ್ತದೆ. ಮಾನ್ಯ ಸದಸ್ಯರು ಬೆಂಗಳೂರು ಬಗ್ಗೆ ಹೇಳಿದರೂ ನಮಗೆ ಇಡೀ ರಾಜ್ಯದ ಬಗ್ಗೆ ಆಸಕ್ತಿ ಇದೆ.

ಶ್ರೀ ಎ. ಲಕ್ಷ್ಮಿಸಾಗರ್.—ನೀವು ಸಾಗರಕ್ಕೆ ರಸ್ತೆ ಹಾಕಿಕೊಂಡಿದ್ದೀರಿ ಅದನ್ನು ನಾನು ಪ್ರಶ್ನೆ ಮಾಡಲಿಲ್ಲ ನೀವು ಬೆಂಗಳೂರಿನಲ್ಲಿ ವಾಸವಾಗಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಈ ಬಗ್ಗೆ ವೀರೇಂದ್ರಪಾಟೀಲರನ್ನು ಭೇಟಿಯಾಗಿ ಆರನೇ ಪ್ಲಾನ್ ಪೀರಿಯಡ್‌ನಲ್ಲಿ ಸ್ವಲ್ಪ ಆದರೂ ಕೊಡಬೇಕೆಂದು ಹೇಳಿದಾಗ ನಾಲ್ಕಕ್ಕೂ ಕೊಡಲಿಕ್ಕೆ ಕಷ್ಟವಾಗುತ್ತದೆ ಯಾವುದಾದರೂ ಮುಖ್ಯವಾದ್ದು ಹೇಳಿ ಅಂದಾಗ ಮೈಸೂರು ಮೇಲೆ ಹಾದು ಹಿರಿಯೂರು ಮಾರ್ಗವಾಗಿ ಹುಮ್ನಾಬಾದ್‌ಗೆ ಸೇರುತ್ತದೆ ಅದು ರಾಜ್ಯದ ಮಧ್ಯೆ ಹೋಗತಕ್ಕದ್ದು ಸುಮಾರು ೬೭೮ ಕಿಲೋಮಿಟರ್ ಆಗುತ್ತದೆ. ಇದನ್ನು ಪ್ರಮುಖವಾಗಿ ಸೇರಿಸಿಕೊಳ್ಳತಕ್ಕದ್ದು ನ್ಯಾಯ ಯಾವುದಾದರೂ ಒಂದು ರಸ್ತೆ ಸೇರಿಸಿದರೆ ಸಾಕು ಎಂದು ಹೇಳಿದ್ದೇನೆ. ಇವೊತ್ತು ಮಾನ್ಯ ವಿರೋಧಪಕ್ಷದ ನಾಯಕರು ಕೇಂದ್ರಸರ್ಕಾರದ ಮನವೊಲಿಸತಕ್ಕ ಕೆಲಸ ಮಾಡಿಲ್ಲ ಎಂದು ಏನು ಹೇಳಿದರೂ ಅದು ಸತ್ಯಕ್ಕೆ ದೂರ ವಾದುದು, ನಮಗೆ ಕೊಡಬೇಕಾದ್ದು ನ್ಯಾಯ ಇದೆ ಎಂದು ಕೇಂದ್ರ ಸರ್ಕಾರದ ಮನವೊಲಿಸಿದ್ದೇವೆ. ಈ ದೃಷ್ಟಿಯಿಂದ ನಮಗೆ ನ್ಯಾಯ ಸಿಕ್ಕುತ್ತದೆ ಎನ್ನುವ ಸಂಪೂರ್ಣ ಭರವಸೆ ನಮಗೆ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಕೇಂದ್ರ ಸರ್ಕಾರದ ಮಂತ್ರಿಗಳನ್ನು ಇದರ ಬಗ್ಗೆ ಭೇಟಿಯಾಗಿದ್ದಾಗ ಇದರ ಅವಶ್ಯಕತೆಯ ಬಗ್ಗೆ ಅವರಿಗೆ ಮನವರಿಕೆಯಾಗುವಂತೆ ಹೇಳಲಿಕ್ಕೆ ಇಷ್ಟಪಟ್ಟಿದ್ದೇನೆ, ಈಗ ಹಣ ಇಲ್ಲ, ಓನೇ ಪ್ಲಾನ್ ಪೀರಿಯಡ್‌ನಲ್ಲಿ ಅಪ್ರೈಸಲ್ ಆದಮೇಲೆ ಹಣ ಮಿಕ್ಕಿದರೆ ಈ ವರ್ಷ ಮಧ್ಯ ಭಾಗದಲ್ಲಿ ಪ್ರಯತ್ನ ಮಾಡುತ್ತೇವೆಂದು ಹೇಳಿದರು. ಇದೆಲ್ಲಾ ಅಡ್ಮಿನಿಸ್ಟ್ರೇಟೀವ್ ಡೀಟೈಲ್ಸ್. ಮಾನ್ಯ ತಿಮ್ಮಪ್ಪನವರು ಜವಾಬ್ದಾರಿ ತೆಗೆದುಕೊಂಡಿದ್ದಾರೆ, ಕೇಂದ್ರದಿಂದ ಹಣ ಪಡೆಯಲಿಕ್ಕೆ ಪ್ರಯತ್ನ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ನಮಗೆ ಫಲ ಸಿಕ್ಕಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಜವಾಬ್ದಾರಿ ನಿರ್ವಹಿಸಿರುವ ಕಾರಣದಿಂದಲೇ ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ಹಿಂದೆ ನಮಗೆ ೧೯೮೧-೮೨ ರಲ್ಲಿ ಎಲ್ಲಾ ಒಟ್ಟು ೧೧ ಕೋಟಿ ೨೧ ಲಕ್ಷ ರೂಪಾಯಿವರೆಗೆ ಬಂದಿದೆ ಕಳೆದ ಎರಡು ಮೂರು ವರ್ಷಗಳಿಂದ ಬಂದಿರತಕ್ಕ ಹಣವನ್ನು ಹೋಲಿಸಿಕೊಂಡರೆ ಹೆಚ್ಚು ಹಣ ನಮಗೆ ಬಂದಿದೆ. ಇನ್ನೂ ಹೆಚ್ಚು ಹಣ ಬರತಕ್ಕ ಭರವಸೆ ನಮಗೆ ಇದೆ.

ಶ್ರೀ ಜ. ರಾಜೂಗೌಡ —ಒಂದು ಕಿಲೋಮಿಟರ್ ಉದ್ದದ ರಸ್ತೆಯನ್ನು ಸರಿಯಾಗಿ ಇಟ್ಟುಕೊಳ್ಳುವುದಕ್ಕೆ ವರ್ಷ ಒಂದಕ್ಕೆ ಒಂದು ಕಿಲೋಮಿಟರ್‌ಗೆ ಸುಮಾರು ೨೪ ಸಾವಿರ ರೂಪಾಯಿ ವೆಚ್ಚವಾಗುತ್ತದೆಂದು ತಿಳಿಸಿದ್ದೀರಿ. ಇದನ್ನು ನೋಡಿದರೆ ೧೯೬೪ ಕಿಲೋಮಿಟರ್‌ಗೆ ಸುಮಾರು ೪೭೫ ಲಕ್ಷ ರೂಪಾಯಿವರೆಗೆ ಖರ್ಚು ಬರುತ್ತದೆ. ಇದರಿಂದ, ಹೊಸದಾಗಿ ರಾಷ್ಟ್ರೀಯ ಹೆದ್ದಾರಿ ಮಾಡುವುದು ಉದ್ದವಾಗುವುದಿಲ್ಲ. ಇನ್ನು ಗುಂಡ್ಲುಪೇಟೆ, ಗುಲ್ಬರ್ಗದ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತನೆ ಮಾಡಲಿಕ್ಕೆ ಸಾಧ್ಯವೇ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಒಂದು ಕಿಲೋಮಿಟರ್ ರಸ್ತೆಗೆ ೨೪ ಸಾವಿರ ರೂಪಾಯಿ ಖರ್ಚು ಬೀಳುತ್ತದೆ. ಒಟ್ಟು ಖರ್ಚು ೪ ಕೋಟಿ ೭೫ ಲಕ್ಷದವರೆಗೆ ಬರುತ್ತದೆ ಅವರು ಕೊಡತಕ್ಕದ್ದು ೨.೭೯ ಕೋಟಿ ರೂಪಾಯಿ ಇದು ಕಡಿಮೆಯಾಗುತ್ತಿದೆ. ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಕೇಂದ್ರ ಸರ್ಕಾರದಲ್ಲಿ ರೋಡ್‌ಗೋಸ್ಕರ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿಲ್ಲ. ನಾವು ಹೆಚ್ಚು ಹಣ ಕೊಡಬೇಕೆಂದು ಕೇಳಿದ್ದೇವೆ. ಇನ್ನು ಮಾನ್ಯ ಸದಸ್ಯರು ಸ್ಟೇಟ್‌ಹೈವೇ ಕನ್‌ವರ್ಟ್ ಮಾಡಿ ಎಂದು ಹೇಳಿದ್ದಾರೆ. ಈಗಾಗಲೇ ನಾವು ಆ ಪಾಯಿಂಟ್ಸ್‌ನಲ್ಲಿ ಸೂಕ್ತ ಕ್ರಮ ಕೈಗೊಳ್ಳುತ್ತಿದ್ದೇವೆ.